( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ14/03/2024**
**ಅಸಲು ದಾವೆ.ನಂ.47/2020**
**ಪಿ.ಡಬ್ಲ್ಯೂ1**

( ಪಾಟೀ ಸವಾಲುಃ ಶ್ರೀ. ಆರ್.ಸಿ. ವಕೀಲರಿಂದ ಪ್ರತಿವಾದಿಗಳ ಪರವಾಗಿ )

ನಾನು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳು ನನ್ನ ಜೊತೆ ಗಲಾಟೆ ಮಾಡಿದ 15 ದಿನಗಳ ನಂತರ ಈ ದಾವೆಯನ್ನು ನಾನು ಹಾಕಿರುತ್ತೇನೆ. ಗಲಾಟೆಯಾಯಿತು ಎನ್ನಲಾದ ದಿನ 3 ನೇ ಪ್ರತಿವಾದಿ ಊರಿನಲ್ಲಿ ಇರಲಿಲ್ಲ ಮತ್ತು ಅವರು ಆ ದಿನ ಸೇನೆಯಲ್ಲಿ ಕರ್ತವ್ಯದಲ್ಲಿ ಇದ್ದರು ಎಂದರೆ ಸರಿಯಲ್ಲ. ಗಲಾಟೆಯಾಯಿತು ಎನ್ನಲಾದ ಸಮಯದಲ್ಲಿ ನಾನು ಅದರ ಬಗ್ಗೆ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ಗಲಾಟೆಯು ಬೆಳಗ್ಗೆ 8.30 ರಿಂದ 9.00 ಗಂಟೆಯ ಸಮಯ ಆಗಿತ್ತು. ನಾನು ಗಲಾಟೆಯಾದಾಗ ಸಮಯನ್ನು ನಿಖರವಾಗಿ ನೋಡಿರುವುದಿಲ್ಲ. ನಾನು ಈ ದಾವೆಯ ಪ್ರತಿವಾದಿಯರ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ವಾದದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ನನಗೆ ಪ್ರತಿವಾದಿಗಳು ಮಚ್ಚು ಕೊಡಲಿಯನು ಹಿಡಿದುಕೊಂಡು ಹಲ್ಲೆ ಮಾಡಲು ಬಂದಿದ್ದರು ಎಂದು ನಾನು ಠಾಣೆಗೆ ನೀಡಿದ ದೂರಿನಲ್ಲಿ ಹೇಳಿರುವುದಿಲ್ಲ. ನಾನು ಆರೊಪಿಗಳು ಮಚ್ಚು ಕೊಡಲಿಯಿಂದ ಹಲ್ಲೆ ಮಾಡಲು ಮುಂದಾದರು ಎಂದು ವಾದ ಪತ್ರದಲ್ಲಿ ಬರೆಯಿಸಿಲ್ಲ. ದಾವಾ ಅನುಸೂಚಿ ಸ್ವತ್ತಿನ ವಿಚಾರವಾಗಿ ಊರಿನಲ್ಲಿ ಯಾವುದೇ ಪಂಚಾಯಿತಿ ನಡೆದಿಲ್ಲ.

ಮರಿಯಪ್ಪ ಎಂದರೆ ನನ್ನ ತಂದೆ. ನನ್ನ ತಂದೆಗೆ ನಾವು 7 ಜನ ಮಕ್ಕಳು, ಅವರೆಂದರೆ, 1. ಮೇರಿತೆರೇಸಾ, 2. ಅಂಥೋಣಿಸ್ವಾಮಿ, 3. ಪೀಟರ್ ಉಲ್ಲಾಸಪ್ಪ ಅಂದರೆ ನಾನು, 4. ಗಾಬ್ರಿಯಲ್ ಮೇರಿ, 5. ಪಾತೀಮಾ ಮೇರಿ 6. ಲೂರ್ದ್ ಮೇರಿ 7. ಜ್ಯೋತಿ. ನನ್ನ ತಂದೆ ಈ ಬದುಕಿರುವುದಿಲ್ಲ, ಈ ದಾವೆಯನ್ನು ಹೂಡಿದ ನಂತರ ಅವರು ಕಾಲವಾಗಿರುತ್ತಾರೆ. ನನ್ನ ತಂದೆಯವರು ಮರಣ ಹೊಂದಿದ ಬಗ್ಗೆ ನನ್ನ ತಂದೆಯವರ ಮರಣ ದೃಡೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ.

1977-78 ನೇಸಾಲಿನಲ್ಲಿ ನನ್ನತಂದೆಗೆ ಸ.ನಂಃ 47 ರಲ್ಲಿ ಜಮೀನು ಮಂಜೂರು ಆಗಿರುತ್ತದೆ.ಅವರಿಗೆ

4 ಎಕರೆ ಜಮೀನು ಮಂಜೂರು ಆಗಿತ್ತು. ಸದರಿ ಜಮೀನಿಗೆ ಸಂಬಂಧಪಟ್ಟ ಮಂಜೂರಿ ಸ್ಕಚ್ ನ್ನು ನಾನು ನೋಡಿರುತ್ತೇನೆ. ನನ್ನ ತಂದೆಗೆ ಮಂಜೂರಾದ ಜಮೀನಿನ ಸರ್ವೆ ನಂಬರ್ ನಲ್ಲಿ ಒಟ್ಟು 4 ಎಕರೆ 21 ಗುಂಟೆ ಜಮೀನು ಇತ್ತು. ಚೌರಪ್ಪನವರ ಮಗ ಸಬ್ಯಾಸ್ಟಿನ್ ನನ್ನ ಪಕ್ಕದ ಜಮೀನಿನವರು. ಸದರಿ ಸಬ್ಯಾಸ್ಟೀನ್ ರವರ ಮಗನೇ 1 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಂದೆಗೆ ಮಂಜೂರಾದ ಜಮೀನಿನ ಸರ್ವೆ ನಂಬರ್ ನಲ್ಲಿ ಸದರಿ ಸಬ್ಯಾಸ್ಟೀನ್ ರವರಿಗೆ 21 ಗುಂಟೆ ಜಮೀನು ಮಂಜೂರು ಆಗಿತ್ತು ಎಂದರೆ ಸರಿ. ಸದರಿ 21 ಗುಂಟೆ ಜಮೀನು ಅವರಿಗೆ ನನ್ನ ತಂದೆಗೆ 4 ಎಕರೆ ಜಮೀನು ಮಂಜೂರು ಆಗುವ ಮುಂಚೆಯೇ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಗೆ ಮತ್ತು 1 ನೇ ಪ್ರತಿವಾದಿಯ ತಂದೆಗೆ ಜೊತೆಗೆ ಜಮೀನು ಮಂಜೂರು ಆಗಿತ್ತು ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ನನ್ನ ಮನೆ ಇರುತ್ತದೆ. ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ಬೆಟ್ಟಗಳಲೆ ಗ್ರಾಮದ ಪಟೇಲ್ ರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಅದು ಉತ್ತರಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ಬೆಳ್ಳಾಮೆ ಊರು ಇರುತ್ತದೆ ಎಂದರೆ ಸಾಕ್ಷಿಯು ಬೆಳ್ಳಾಮೆ ಊರು ಕೂಡ ಇರುತ್ತದೆ ಜೊತೆಗೆ ಬೆಟ್ಟಗಳಲೆ ಗ್ರಾಮದ ಜಮೀನು ಕೂಡ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಂದೆಗೆ ಮಂಜೂರಾದ 21 ಗುಂಟೆ ಜಮೀನಿನ ದಕ್ಷಿಣಕ್ಕೆ ಅವರ ಹೆಸರಿಗೆಯೇ 3 ಎಕರೆ 21 ಗುಂಟೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ 2 ಜಮೀನಿನ ಪಶ್ಚಿಮಕ್ಕೆ ಕೆರೆಕೋಡಿ ಬರುತ್ತದೆ ಎಂದರೆ ಸರಿ. ಸದರಿ 3 ಎಕರೆ 21 ಗುಂಟೆ ಮತ್ತು 21 ಗುಂಟೆ ಪ್ರತಿವಾದಿಗಳ ಜಮೀನಿನ ಮಧ್ಯದಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಮೀಸಲಾಗಿರುವ ಜಮೀನಿನ ಸ್ಕೆಚ್ ನ್ನು ನಾನು ನೋಡಿರುವುದಿಲ್ಲ.

ನಾನು ಈ ಮೇಲೆ ಹೇಳಿದ ಕೆರೆಗೆ ಸತ್ತೆ ಕೆರೆ ಎಂದು ಹೆಸರು ಎಂದರೆ ಸರಿ. ಸದರಿ ಸತ್ತೆ ಕೆರೆಯ ನೀರು ಹರಿದು ಹೋಗಲೆಂದು ಕಾವೇರಿ ನೀರಾವರಿ ನಿಗಮದವರು 7 ಗುಂಟೆ ಜಮೀನನ್ನು ಮೀಸಲಾಗಿ ಇರಿಸಿದ್ದಾರೆ ಎಂದರೆ ಸರಿಯಲ್ಲ. ಕಾವೇರಿ ನೀರಾವರಿ ನಿಗಮದವರು ಸದರಿ ಸತ್ತೆ ಕೆರೆಯ ನೀರು ಹರಿಯಲು ಅನುಕೂಲವಾಗಲಿ ಎಂದು ಸದರಿ 7 ಗುಂಟೆ ಜಮೀನನ್ನು ಮೀಸಲಾಗಿ ಇರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಸತ್ತೆ ಕೆರಯ ನೀರು ಪೂರ್ವದಲ್ಲಿರುವ ಕೆರೆಗಳಿಗೆ ಸದರಿ 7 ಗುಂಟೆ ಜಮೀನಿನ ಮೂಲಕ ಹರಿದು ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ಸತ್ತೆ ಕೆರೆಯನೀರು ತುಂಬಿದಾಗ ಅದು ಪೂರ್ವ

ದಿಕ್ಕಿಗೆ ಹರಿದು ಹೋಗುತ್ತದೆ ಎಂದರೆ ಸರಿ. ಪೂರ್ವಕ್ಕೆ ಹರಿಯುವಾಗ ಅದು 7 ಗುಂಟೆ ಜಮೀನಿನ ಮೂಲಕವಾಗಿ ಹರಿದು ಹೋಗುತ್ತದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದು ಮತ್ತು ಬರೆಯಲು ಬರುತ್ತದೆ.

ನಿಪಿ-20 ರ 2 ನೇ ಪುಟದಲ್ಲಿರುವ 7 ಗುಂಟೆ ಜಮೀನು ಕಾವೇರಿ ನೀರಾವರಿ ನಿಗಮದ್ದು ಎಂದು ಇರುವುದಕ್ಕೂ ನಮಗೂ ಸಂಬಂಧವಿಲ್ಲ ಎಂದರೆ ಸರಿ. ನನ್ನ ತಂದೆಗೆ ಜಮೀನು ಮಂಜೂರಾದಾಗ ಅದರ ಸರ್ವೆ ನಂಬರ್ 47 ಎಂದು ಇತ್ತು. ನಾನು 1 ಎಕರೆ 8 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹಾಕಿರುತ್ತೇನೆ.

ಅಂಥೋಣಿಸ್ವಾಮಿ ನನ್ನ ಅಣ್ಣ. ಸದರಿ 4 ಎಕರೆ ಜಮೀನಿನ ಪೂರ್ವಕ್ಕೆ ನಾನು ತಿರುಗಾಡಲು ಬಿಟ್ಟುಕೊಂಡಿರುವ ದಾರಿ, ಪಶ್ಚಿಮಕ್ಕೆ ಕೆರೆ ಇರುತ್ತದೆ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ನಾನು ಸುಳ್ಳು ಚೆಕ್ಕು ಬಂದಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆರೆಕೋಡಿಯನ್ನು ನಾಶ ಮಾಡುತ್ತಿದ್ದಾರೆ ಎಂದು ಕಾವೇರಿ ನೀರಾವರಿ ನಿಗಮಕ್ಕೆ ಯಾವುದೇ ದೂರನ್ನು ನಾನು ನೀಡಿಲ್ಲ.

(ಮರು ವಿಚಾರಣೆ ಇಲ್ಲ. )

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.